# ಲಸಿಕೆಗೆ 500 ರೂ. ಫಿಕ್ಸ್

## ಪ್ರತಿ ಡೋಸ್‌ಗೆ 250, 2 ಡೋಸ್‌ಗೆ 500 ರೂ. ದರ ನಿಗದಿ

## ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ । ಖಾಸಗಿಯಲ್ಲಿ ಮಾತ್ರ ಹಣ

ನವದೆಹಲಿ: ಸೋಮವಾರದಿಂದ 2ನೇ ಹಂತದ ಲಸಿಕಾ ಕಾರ್ಯಕ್ರಮ ಆರಂಭವಾಗಲಿದ್ದು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆಯುವವರಿಗೆ ದರವನ್ನು ನಿಗದಿಪಡಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಇದರಂತೆ ಪ್ರತಿ ಡೋಸ್ ಲಸಿಕೆಗೆ 250 ರೂ.ಗಳಾಗಿದ್ದು ಎರಡು ಡೋಸ್‌ಗೆ 500 ರೂ. ಆಗುವ ಸಾಧ್ಯತೆ ಇದೆ.

ಮಾ.1ರಿಂದ 60 ವರ್ಷ ದಾಟಿದ ಹಿರಿಯರು ಮತ್ತು ಇತರೆ ರೋಗಗಳಿರುವ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಲಸಿಕೆ ಸೌಲಭ್ಯವಿದ್ದು ಖಾಸಗಿ ಆಸ್ಪತ್ರೆಗಳಲ್ಲಿ ಪ್ರತಿ ಡೋಸ್‌ಗೆ 250 ರೂ. ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಇದರಲ್ಲಿ 150 ರೂ. ಲಸಿಕೆಗೆ ಮತ್ತು 100 ರೂ.ಗಳನ್ನು ಸೇವಾಶುಲ್ಕವಾಗಿ ತೆಗೆದುಕೊಳ್ಳಬಹುದು. ಈ ದರ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ ಎಂದು ಕೇಂದ್ರ ಆರೋಗ್ಯ ಇಲಾಖೆ ತಿಳಿಸಿದೆ.

ಶನಿವಾರ ಕೇಂದ್ರ ಆರೋಗ್ಯ ಕಾರ್ಯದರ್ಶಿಗಳು ಎಲ್ಲಾ ರಾಜ್ಯಗಳ ಆರೋಗ್ಯ ಕಾರ್ಯದರ್ಶಿಗಳ ಜತೆ ವಿಡಿಯೊ ಸಂವಾದದಲ್ಲಿ ಮಾತುಕತೆ ನಡೆಸಿ, ಲಸಿಕಾ ವಿತರಣೆ ಸಿದ್ಧತೆ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. 2ನೇ ಹಂತದಲ್ಲಿ ಯಾವ ರೀತಿ ಲಸಿಕೆ ನೀಡಬೇಕು ಎಂಬ ಬಗ್ಗೆಯೂ ಚರ್ಚಿಸಲಾಗಿದೆ.

**ಎಲ್ಲಾ ಆಸ್ಪತ್ರೆ ಬಳಸಿಕೊಳ್ಳಿ:** ಈ ಹಂತದಲ್ಲಿ 10 ಕೋಟಿ ಮಂದಿಗೆ ಲಸಿಕೆ ನೀಡಬೇಕಾಗಿದೆ. ಹೀಗಾಗಿ, ಎಲ್ಲಾ ರೀತಿಯ ಸರ್ಕಾರಿ ಆಸ್ಪತ್ರೆಗಳನ್ನು ಬಳಸಿಕೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ. ಆಯುಷ್ಮಾನ್ ಭಾರತ್-ಪಿಎಂಜೆಎವೈ ಯೋಜನೆಯಡಿ ಬರುವ 10 ಸಾವಿರ ಆಸ್ಪತ್ರೆಗಳು ಮತ್ತು 687 ಸಿಜಿಎಚ್‌ಎಸ್‌ಗಳನ್ನು ಲಸಿಕಾ ಕೇಂದ್ರಗಳಾಗಿ ಬಳಸಿಕೊಳ್ಳಬಹುದಾಗಿದೆ.



### ಲಸಿಕೆ ಪಡೆಯಲು ನೋಂದಣಿ ಹೇಗೆ?

ಲಸಿಕೆ ಪಡೆಯಲಿಚ್ಛಿಸುವ ಫಲಾನುಭವಿಗಳು ಕೋವಿನ್ 2.0 ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಖಾಸಗಿ ಆಸ್ಪತ್ರೆಗಳ ಬಳಕೆಗಾಗಿ ಕೋವಿನ್ 2.0 ಆ್ಯಪ್‌ನ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ನೀಡಲಾಗುತ್ತದೆ. 45 ವರ್ಷ, 60 ವರ್ಷ ದಾಟಿದವರು ವೈದ್ಯರ ಕಡೆಯಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಕೋವಿನ್ 2.0 ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಲಸಿಕಾ ಕೇಂದ್ರಕ್ಕೆ ಬರುವಾಗ ಈ ಪ್ರಮಾಣ ಪತ್ರಕ್ಕೆ ಸ್ವಯಂ ಸಹಿ ಮಾಡಿಕೊಂಡು ತರಬೇಕು. ಫಲಾನುಭವಿಗಳು ಆರೋಗ್ಯ ಸೇತು ಆ್ಯಪ್‌ನಲ್ಲೂ ನೋಂದಣಿ ಮಾಡಿಕೊಳ್ಳಬಹುದು. ಬಳಿಕ ಈ ಆ್ಯಪ್‌ಗಳಲ್ಲಿ ಫಲಾನುಭವಿಗಳ ಹತ್ತಿರದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಪಟ್ಟಿಯನ್ನು ತೋರಿಸುತ್ತವೆ. ಇದನ್ನು ಆರಿಸಿಕೊಂಡು ಲಸಿಕೆ ಪಡೆಯಲು ಹೋಗಬಹುದು. ಕೋವಿನ್ 2.0 ಆ್ಯಪ್ ಮಾ.1ರ ನಂತರವೇ ಆರಂಭವಾಗಲಿದೆ.

### 268 ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ

ರಾಜ್ಯದಲ್ಲಿ ಸಾರ್ವಜನಿಕರಿಗೆ ಕೊರೊನಾ ಲಸಿಕೆ ವಿತರಣೆಗೆ ಆರೋಗ್ಯ ಇಲಾಖೆ ಸಜ್ಜಾಗಿದ್ದು 268 ಆರೋಗ್ಯ ಕೇಂದ್ರಗಳಲ್ಲಿ ಕೊರೊನಾ ಲಸಿಕೆ ನೀಡಲಾಗುತ್ತಿದೆ. ಪ್ರಮುಖವಾಗಿ ರಾಜ್ಯದ ಎಲ್ಲಾ ತಾಲೂಕು, ಜಿಲ್ಲಾಸ್ಪತ್ರೆ ಹಾಗೂ ಜಿಲ್ಲೆಗೆ ತಲಾ ಎರಡು ಖಾಸಗಿ ಆಸ್ಪತ್ರೆಗಳು, ಬೆಂಗಳೂರಿನಲ್ಲಿ 18 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲು ಕ್ರಮಕೈಗೊಳ್ಳಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವಾರದಲ್ಲಿ ನಾಲ್ಕು ದಿನ ಸೋಮವಾರ, ಬುಧವಾರ, ಶುಕ್ರವಾರ ಹಾಗೂ ಶನಿವಾರ ಲಸಿಕೆ ನೀಡಲಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಎಲ್ಲಾ ದಿನ ಲಸಿಕೆ ಲಭ್ಯವಿದೆ.

ಮೊದಲ ದಿನವಾದ ಮಾ. 1ರಂದು ಮಧ್ಯಾಹ್ನ 12 ಗಂಟೆಯಿಂದ ಸಂಜೆ 5 ಗಂಟೆವರೆಗೂ ಲಸಿಕೆ ನೀಡಲಾಗುತ್ತದೆ. ಪ್ರತಿ ಲಸಿಕೆ ವಿತರಣಾ ಕೇಂದ್ರಕ್ಕೆ ದಿನಕ್ಕೆ 200 ಮಂದಿಗೆ ಮಾತ್ರ ಲಸಿಕೆ ವಿತರಿಸಲಾಗುತ್ತದೆ. ಮೊದಲ ಬಂದವರಿಗೆ ಆದ್ಯತೆ.